೨. ಈ ಕಟ್ಟಡಗಳಲ್ಲಿ ಸರಿಯಾಗಿ ಕಟ್ಟಡ ಕಟ್ಟದೇ ಬೀಳುವ ಹಂತದಲ್ಲಿರುವ ಕಟ್ಟಡಗಳ ಸಂಖ್ಯೆ ಎಷ್ಟು?

೩. ಉಪಯೋಗಕ್ಕೆ ಬಾರದಿರುವ ಕಟ್ಟಡಗಳನ್ನು ಕಟ್ಟಿಸಿರುವ ಇಂಜಿನಿಯರುಗಳು ಯಾರು?

೪. ಅವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮವೇನು?

ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ೧.

	ಶಾಲಾ ಕಟ್ಟಡಗಳು	ಅಂಗನವಾಡಿ ಕಟ್ಟಡಗಳು
ಒಟ್ಟು ಕಟ್ಟಡಗಳು	೯೪	೨೨
ಪೂರ್ಣಗೊಂಡ ಕಟ್ಟಡಗಳು	೮೯	೧೯
ಪ್ರಗತಿ	೦೫	೦೩

೨. ಯಾವುದೂ ಇಲ್ಲ.

೩. ಪ್ರಶ್ನೆ ಉದ್ಭವಿಸುವುದಿಲ್ಲ.

೪. ಪ್ರಶ್ನೆ ಉದ್ಭವಿಸುವುದಿಲ್ಲ.

ತುರುವೇಕೆರೆ ತಾಲ್ಲೂಕಿನ ಮುನಿಯೂರು ಗ್ರಾಮದಲ್ಲಿ ಪ್ರೌಢಶಾಲೆ.

೧೪೧೯(೧೬೮೭)

ಶ್ರೀ ಲಕ್ಷ್ಮೀನಾರಾಯಣ ಎಂ.ವಿ.(ಅಣ್ಣಯ್ಯ) (ತುರುವೇಕೆರೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ತುರುವೇಕೆರೆ ತಾಲ್ಲೂಕು, ಮುನಿಯೂರು ಗ್ರಾಮದಲ್ಲಿ ಸುಮಾರು ೭೦೦ ಮನೆಗಳಿದ್ದು, ಈ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ?

೨) ದೊಡ್ಡ ಗ್ರಾಮವಾದ ಇಲ್ಲಿಗೆ ಪ್ರೌಢಶಾಲೆ ಮಂಜೂರು ಮಾಡಲು ಸರ್ಕಾರಕ್ಕೆ ತೊಂದರೆಯೇನು?

೩) ಈ ಸಾಲಿನಲ್ಲಿ ಸದರಿ ಗ್ರಾಮಕ್ಕೆ ಪ್ರೌಢ ಶಾಲೆ ಮಂಜೂರು ಮಾಡಲಾಗುವುದೆ?

೪) ಈ ಸರ್ಕಾರಿ ಪ್ರೌಢಶಾಲೆಗೆ ಈಗಾಗಲೇ ಜಾಗಕೊಟ್ಟಿರುವುದು ನಿಜವೇ?

ಶ್ರೀ ಹೆಚ್ ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

೧ ಮತ್ತು ೨ ಈ ಗ್ರಾಮದಲ್ಲಿ ಒಂದು ಖಾಸಗಿ ಪ್ರೌಢಶಾಲೆ ನಡೆಯುತ್ತಿರುವುದರಿಂದ ಸರ್ಕಾರಿ ಪ್ರೌಢಶಾಲೆ ಅವಶ್ಯಕತೆ ಇರುವುದಿಲ್ಲವೆಂದು ಕಂಡುಬಂದಿದೆ.

೩) ಇಲ್ಲ.

೪) ಇಲ್ಲ.

ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವುದು.

೧೪೨೦(೧೬೯೨)

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಬೇರೆ ಕಡೆಗೆ ವರ್ಗಾಯಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ ಹೆಚ್ಚುವರಿ ಉಪನ್ಯಾಸಕರುಗಳನ್ನು ಆಯಾಯ ಶಾಲೆಗಳಲ್ಲಿ ತನಿಖೆ ಮಾಡಿ ಗುರುತಿಸಲಾಗುತ್ತಿದೆಯೇ?

ಆ. ಶ್ರೀ ಲಕ್ಷ್ಮೀಶ ಸಂಯುಕ್ತ ಪದವಿ ಪೂರ್ವ ಕಾಲೇಜು ದೇವನೂರು, ಕಡೂರು ತಾಲ್ಲೂಕು, ಚಿಕ್ಕಮಗಳೂರು-ಜಿಲ್ಲೆಯಲ್ಲಿ ಹೆಚ್ಚುವರಿ ಉಪನ್ಯಾಸಕರನ್ನು ಗುರುತಿಸುವಾಗ: ಜೇಷ್ಠತೆ ಮತ್ತು ಅಂಗವಿಕಲತೆಯನ್ನು ಪರಿಗಣಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಅಂಗವಿಕಲತೆಯ ಹಾಗೂ ಬೋಧನೆ ಮಾಡದಿರುವ ಉಪನ್ಯಾಸಕರನ್ನು ಮುಂದುವರಿಸುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೆ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಮಾನದಂಡವೇನು?